ಬ್ರೆಜಿಲ್‌ನವರಾದ ಅನೀಬಾಲ್ ಮೊಂತೆರೊ ಮಚಾದೊ ಪೋರ್ಚುಗೀಸ್ ಭಾಷೆಯಲ್ಲಿ ಕಥೆ, ಪ್ರಬಂಧಗಳನ್ನು ಬರೆದವರು. ಫುಟ್ ಬಾಲ್ ಆಟಗಾರ, ಸಾಹಿತ್ಯ ಸಂಘಟಕ ಕೂಡಾ. ಅವರು 1944ರಲ್ಲಿ ಬರೆದ ಪಿಯಾನೊ ಕಥೆಯನ್ನು ವಿಲಿಯಮ್ ಕ್ರಾಸ್ಮಾನ್ ಇಂಗ್ಲಿಷ್‌ಗೆ ಅನುವಾದಿಸಿದ್ದು, ಈ ಕಥೆಯೀಗ ಗೋಪಾಲ ಕೃಷ್ಣ ಪೈ ಅವರ ಮೂಲಕ ಕನ್ನಡಕ್ಕೆ ಬಂದಿದೆ.

ಆ ಹುಡುಗಿ ಒಮ್ಮೆಲೇ ನುಡಿಸುವುದನ್ನು ನಿಲ್ಲಿಸಿದಳು. ಎದ್ದು ನಿಂತು ತನ್ನ ತುಟಿಗೆ ಒಂದಷ್ಟು ಬಣ್ಣ ಸವರಿ ತನ್ನ ಸಂಗೀತದ ಪುಸ್ತಕವನ್ನು ಕೈಗೆತ್ತಿಕೊಂಡಳು.

'ನೀವು ಈ ದರಿದ್ರದ ಬಗ್ಗೆ ಜಾಹೀರಾತು ಕೊಡುವ ಧೈರ್ಯ ಹೇಗೆ ಮಾಡಿದಿರಿ ಅನ್ನುವುದೇ ತಿಳಿಯುತ್ತಿಲ್ಲ' ಎಂದು ಯಾವೋನನ್ನು ಉದ್ದೇಶಿಸಿ, ಆದರೆ ರೋಸಾಲಿಯಾಳನ್ನೇ, ಅವಳೇ ಒಂದು ಭಯಂಕರ ವಸ್ತು ಎನ್ನುವಂತೆ ನೋಡುತ್ತಾ ಹೇಳಿದಳು. ಮತ್ತು ಹೊರ ನಡೆದಳು.

ಒಂದು ಕ್ಷಣ ಯಾವೋ ಮಾತನಾಡಲಿಲ್ಲ. ಇಷ್ಟಕ್ಕೂ ಅವಳು ಅವಮಾನಿಸಿದ್ದು ಆ ಹಳೆಯ ಪಿಯಾನೊವನ್ನು ತಾನೇ? ತನ್ನನ್ನಲ್ಲವಲ್ಲ. ಅಲ್ಲದೇ ಇದೊಂದು ಪ್ರಾಚ್ಯ ವಸ್ತು ಎಂದು ಹೇಳಲೇಬೇಕೆಂದು ಅವನಿಗನ್ನಿಸಿತು. 'ಇಂಥದ್ದನ್ನು ಈಗ ಯಾರೂ ತಯಾರಿಸುವುದಿಲ್ಲ. ತಯಾರಿಸಲು ಆಗುವುದೇ ಇಲ್ಲ' ಖಡಾಖಂಡಿತ ಧ್ವನಿಯಲ್ಲಿ ಅವನು ಹೇಳಿದ.

ಅಲ್ಲೊಂದು ದೀರ್ಘ ಮೌನ ಉಂಟಾಯಿತು. ಪಿಯಾನೊದ ಅವಸ್ಥೆ ತಳಕ್ಕೆ ಮುಟ್ಟಿತ್ತು. ಕೊನೆಗೆ ಕೆಂಚುಗೂದಲಿನ ವ್ಯಕ್ತಿ ಕೇಳಿದ, 'ಇದಕ್ಕೆ ಎಷ್ಟು ದರ ಹೇಳುತ್ತೀರಿ?'

ಅಲ್ಲಿಯ ತನಕ ನಡೆದುದನ್ನು ತಲೆಯಲ್ಲಿಟ್ಟುಕೊಂಡು ಯಾವೋ ದೆ ಒಲಿವೈರಾ ತಾನು ನಿರೀಕ್ಷಿಸಿದುದಕ್ಕಿಂತ ಸಾಕಷ್ಟು ಕಮ್ಮಿ ದರ ಹೇಳಿದ, 'ಐದು ಕೋಂಟೋಗಳು' ಎಂದ ನಿರ್ವಿಣ್ಣನಾಗಿ.

ತನ್ನ ಮಾತಿನ ಪರಿಣಾಮ ಏನಾಗಿರಬಹುದೆಂದು ಅವನು ಪ್ರತಿಯೊಬ್ಬರ ಮುಖ ನೋಡಿದ. ಎಲ್ಲರೂ ಮೌನವಾಗಿಯೇ ಪ್ರತಿಕ್ರಿಯಿಸಿದರು. ಒಲಿವೈರಾನಿಗೆ ಮೈಮೇಲೆ ತಣ್ಣೀರು ಸುರಿದಂತಾಯಿತು. ಅದೇನು ದುಬಾರಿ ದರವಾಗಿತ್ತೇ? ಮುದುಕಿ ಮಾತ್ರ ವಿನಯದಿಂದ ತನ್ನ ಅಭಿಪ್ರಾಯವನ್ನು 'ಯೋಚಿಸುತ್ತೇನೆ' ಎಂದು ಹೇಳಿದಳು. ಆದರೆ, ಆ ವಿನಯದ ಹಿಂದಿನ ಅವಳ ನಿರ್ಧಾರವನ್ನು ಯಾವೋ ಗುರುತಿಸಿದ.

ಅವರೆಲ್ಲರೂ ಹೊರಬೀಳುವ ಹೊತ್ತಿಗೆ ಬಾಗಿಲಿಗೆ ಬಂದು ಮುಟ್ಟಿದ ಒಬ್ಬ ಬೇರೆಯ ವ್ಯಕ್ತಿ ಪಕ್ಕಕ್ಕೆ ಸರಿದು ನಿಂತ. 'ನೀವು ಪಿಯಾನೊ ನೋಡಲು ಬಂದಿರಾ?' ಎಂದು ಅವರಲ್ಲೊಬ್ಬರು ಪ್ರಶ್ನಿಸಿದರು. ಆಮೇಲೆ 'ಆಗಲಿ, ನೀವು...' ಒಲಿವೈರಾ ಮಧ್ಯೆ ಬಾಯಿ ಹಾಕಿದ.

ಪ್ರಸನ್ನತೆಯಿಂದ ಅವನನ್ನು ಸ್ವಾಗತಿಸುತ್ತಾ, 'ಬನ್ನಿ, ಒಳಗೆ ಬನ್ನಿ. ಇಲ್ಲೇ ಇದೆ. ತುಂಬ ಜನರು ಅದನ್ನು ನೋಡುತ್ತಿದ್ದಾರೆ' ಎಂದ.

ಬಂದ ವ್ಯಕ್ತಿ ಮಧ್ಯವಯಸ್ಕ. ತಲೆ ತುಂಬ ಬೂದು ಬಣ್ಣದ ಕೂದಲ ಜೊಂಪೆ. ಪಿಯಾನೊದ ಹಲಗೆಯನ್ನೆತ್ತಿ ಬಹಳ ಹೊತ್ತು ಅದರ ಒಳಭಾಗಗಳನ್ನೆಲ್ಲ ಪರೀಕ್ಷಿಸಿದ.

ಬಹುಶಃ ಅವನೊಬ್ಬ ಸಂಗೀತ ಮೇಷ್ಟ್ರು ಆಗಿರಬೇಕೆಂದು ಊಹಿಸಿದ ಯಾವೋ.

ಆ ವ್ಯಕ್ತಿ ಬೆಲೆ ಕೇಳಲಿಲ್ಲ. 'ವಂದನೆಗಳು' ಎಂದು ಹೇಳಿ ಹೊರಬಿದ್ದ.

ಮನೆ ಖಾಲಿಯಾಯಿತು. ಸಾರಾ ಹೋಗಿ ತನ್ನ ಕೋಣೆ ಸೇರಿದಳು. ರೊಸಾಲಿಯ ಮತ್ತು ಯಾವೋ ನಿರಾಸೆಯಿಂದ ಪರಸ್ಪರ ಮುಖ ನೋಡಿಕೊಂಡರು.

'ಯಾರಿಗೂ ಅದರ ಕಿಮ್ಮತ್ತಿನ ಅರಿವಿಲ್ಲ' ಎಂದು ಬೇಸರದಿಂದ ಹೇಳಿದ ಯಾವೋ. 'ಸರಿಯಾದ ಬೆಲೆ ಸಿಗದಿದ್ದರೆ ಅದನ್ನು ನಾನು ಮಾರುವುದೇ ಇಲ್ಲ.'

'ಆದರೆ, ಸಾರಾಳ ಮದುವೆಯ ಉಡುಪಿಗೆ ಏನು ಮಾಡೋಣ?' ಎಂದು ಕೇಳಿದಳು ರೊಸಾಲಿಯ.

'ಸಾಲ ಮಾಡುತ್ತೇನೆ.'

'ಸಾಲ ಮಾಡಿದರೆ ನಿನ್ನ ಸಂಬಳದಲ್ಲಿ ಅದನ್ನು ತೀರಿಸುವುದು ನಿನ್ನಿಂದ ಸಾಧ್ಯವಿಲ್ಲ.'

'ಮದುವೆಯನ್ನೇ ಮುಂದೂಡೋಣ.'

'ಯಾವೋ, ಅವರು ಒಬ್ಬರನ್ನೊಬ್ಬರು